ಶ್ರೀ ಸಿದ್ದಯ್ಯನವರು ಉರುಫ್ ಕುನ್ನಯ್ಯನವರು.—1952-53ನೆಯ ಸಾಲಿಗೆ ಎಷ್ಟು ಹಣವನ್ನು ಒದಗಿಸಲಾಗಿದೆ?

ಶ್ರೀ ಕೆ. ಹನುಮಂತಯ್ಯನವರು.—ಅಲ್ಲೇ ಎಲ್ಲಾ ಕೊಟ್ಟಿದೆ; ಓದಿನೋಡಿ.

ಶ್ರೀ ಸಿದ್ದಯ್ಯನವರು ಉರುಫ್ ಕುನ್ನಯ್ಯನವರು.—ನಾನು ಕೇಳುತ್ತಿರುವುದು 1952-53 ಕ್ಕೆ.

Mr. SPEAKER.—The Hon'ble Member has not asked for it. That does not arise.

ಶ್ರೀ ಬಿ. ರಾಚಯ್ಯನವರು (ಯಳಂದೂರು ಅನುಸೂಚಿತ ಜಾತಿಗಳು).—ನಿಮ್ಮ ತರಗತಿಗಳವರ ಅಭಿವೃದ್ಧಿಗಾಗಿ 1952-53ರಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ?

Mr. SPEAKER.—There is the Budget.

ಶ್ರೀ ಕೆ. ಹನುಮಂತಯ್ಯನವರು.—ಹೋದ ವರ್ಷ ಎಷ್ಟು ಒದಗಿಸಲಾಗಿತ್ತೋ ಈ ಸಲವೂ ಅಷ್ಟೇ ಒದಗಿಸಿದೆ.

ಶ್ರೀ ಬಿ. ರಾಚಯ್ಯನವರು.—ಅದನ್ನು ಹೆಚ್ಚಿಸಲು ಸಾಧ್ಯವಿದೆಯೇ?

ಶ್ರೀ ಕೆ. ಹನುಮಂತಯ್ಯನವರು.—ಬಡ್ಜೆಟ್ಟು ಖೋತಾ ಬಿದ್ದರೂ ಹೋದ ವರ್ಷ ಹರಿಜನರ ಅಭಿವೃದ್ಧಿಗೆ ಎಷ್ಟು ಒದಗಿಸಿತ್ತೋ ಈ ಸಲವೂ ಅಷ್ಟೇ ಒದಗಿಸಿರುವುದನ್ನು ನೋಡಿದರೇ ಸರ್ಕಾರದ ಸದುದ್ದೇಶ ತೋರಿಬರುತ್ತದೆಯೆಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀ ಬಿ. ರಾಚಯ್ಯನವರು.—ಈ ಅಂಕಿಗಳನ್ನು ನೋಡಿದರೆ ಸ್ವಲ್ಪ ಹಣ ಉಳಿತಾಯವಾಗಿದೆಯೆಂದು ಕಾಣುತ್ತದೆ. ಹೀಗೆ lapse ಆಗುವುದಕ್ಕೆ ಕಾರಣವೇನು?

Sri K. HANUMANTHAIYA.—Any reason that the Hon'ble Member furnishes will be carefully considered.

ಶ್ರೀ ಎಚ್. ಟಿ. ಪುಟ್ಟಪ್ಪನವರು (ಹೊಸಕೋಟೆ-ಆನೇಕಲ್-ಅನುಸೂಚಿತ ಜಾತಿಗಳು).—ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ 75 ರೂಪಾಯಿಗಳಿಗೆ ಮೇಲ್ಪಟ್ಟು ಮನೆ ಕಟ್ಟುವುದಕ್ಕೆ ಸಹಾಯ ಮಾಡುವ ಯೋಜನೆಯ ಪ್ರಕಾರ ಹಣ ಒದಗಿಸುತ್ತಿಲ್ಲ. ಇದಕ್ಕೆ ಕಾರಣವೇನು?

Sri K. HANUMANTHAIYA.—That is question pertaining to a particular area and I will look into it.

Transactions in Iron and Steel.

Q.—366. Sri S. R. NAGAPPA SETTY (Shimoga).—

Will the Government be pleased to state :—

(*a*) the quantity of iron sold through the Agricultural Department from the year 1944 to the end of 1951 ;

(*b*) the quantity of iron sold through Multi-purpose Co-operative Societies ;

(*c*) the rates at which and the places from which this iron has been purchased ;

(*d*) the difference between the cost price and the selling price per ton ;

(*e*) the controlled selling rate per ton ;

(*f*) whether the selling price of the merchants and that of the Agricultural Department are different and whether there is difference between the two ;

(*g*) whether there is profit or loss to Government ; whether in these transanctions higher rates have not been recovered from the raiyats ?

A.—Sri H. SIDDAVEERAPPA (Minister for Home Affairs and Agriculture).—

(*a*) 25,612 tons.

(*b*) 8,219 tons, 3 cwts., 2 qrs.

(*c*) Iron and Steel has been purchased from Messrs. The Mysore Iron and Steel Works, Bhadravati and Messrs. Tata Iron and Steel Co., Calcutta, at the rate of Rs. 384-8-0 per ton as detailed below :—

	Rs.	a.	p.
Price ...	348	0	0
Plus extra (railway freight)	36	8	0
Total ...	384	8	0
Sales-tax at Re. 0-0-3 per rupee ...	6	0	3
Grand Total ...	390	8	3

The rate differs from station to station according to the destination railway station to which it is booked.

(*d*) Rs. 64-7-9 per ton.

(*e*) Rs. 390-8-3 per ton.

(*f*) Yes, in the mode of distribution.

(*g*) There is no profit or loss but worked on the principle of service at cost.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು:—ಇದೇ ಕಬ್ಬಿಣವನ್ನು ವರ್ತಕರು ಮಾರಾಟ ಮಾಡಿದರೆ ಯಾವ ರಾಭ ಕೊಡುತ್ತೀರಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಅವರಿಗೆ ಇಂಡಿಯ ಸರ್ಕಾರದ ಕಂಟ್ರೋಲರ್‌ರವರು ದರವನ್ನು ಗೊತ್ತು ಮಾಡಿರುತ್ತಾರೆ. ಆ ದರದಂತೆ ತೆಗೆದು ಕೊಳ್ಳುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಆ ದರವು ಇದಕ್ಕಿಂತಲೂ ಕಡಮೆಯುದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಗೊತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಮಲ್ಟಪರ್ಪಸ್ ಸೊಸೈಟಿಗಳವರು ಕಬ್ಬಿಣದ ಸಾಮಾನುಗಳನ್ನಾವುದನ್ನಾದರೂ ತಯಾರು ಮಾಡಿ ಮಾರಾಟ ಮಾಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕಬ್ಬಿಣವನ್ನು ಯಾವುದಾದರೂ ಇರಾಖೆಗೆ ಸಾಮಾನುಗಳನ್ನು ಮಾಡಲಕ್ಕೆ ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಡಿಪಾರ್ಟ್‌ಮೆಂಟಿನವರು ಗುಳ ತಯಾರು ಮಾಡಿಸಿ ಮಾರಿಸಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಸಂದರ್ಭಗಳಲ್ಲಿ ಮಾರಿಸಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಹಾಗೆ ಮಾರಬೇಕಾದರೆ 9 ಆಣೆ ದರವಿರುವ ಗುಳವನ್ನು ರೂ. 1—2—0 ಗೆ ಮಾರಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—That question has been disallowed by your goodself, Sir. I do not want to answer it.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಅಗ್ರಿಕಲ್ಚರರ್ ಡಿಪಾರ್ಟ್‌ಮೆಂಟಿನವರು ಮಲ್ಟಪರ್ಪಸ್ ಸೊಸೈಟಿಗೆ ಮಾರುವುದಕ್ಕೆ ಕೊಟ್ಟಾಗ ಸೊಸೈಟಿಯವರು ಮತ್ತೆ ಲಾಭ ಸೇರಿಸಿ ಮಾರಾಟ ಮಾಡಿರುವುದು ಗೊತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಲಾಭ ಸೇರಿಸಿಲ್ಲ, ಶೇ॥ 6 ರಷ್ಟು ಕಮಿಷನ್ ಮಾತ್ರ ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಹಾಗೆ ಲಾಭ ಸೇರಿಸಿ ತೆಗೆದುಕೊಂಡಿದ್ದರೆ ಹಣವನ್ನು ವಾಪಸು ಕೊಡುಸುತ್ತೀರಾ?

Mr. SPEAKER.—If the Hon'ble Member furnishes specific instances, Government will enquire.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ-ಅನುಸೂಚಿತ ಜಾತಿಗಳು).—ಮಲ್ಟಿ ಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಅಗ್ರಿಕಲ್ಚರರ್ ಡಿಪಾರ್ಟ್‌ಮೆಂಟಿನವರು defecitive ಆಗಿರತಕ್ಕ flats ಮತ್ತು M. S. Rods ಗಳನ್ನು ಸಪ್ಲೈಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಗ್ರಿಕಲ್ಚರರ್ ಇಲಾಖೆಯಲ್ಲಿ ಯಾವ ಯಾವ ವ್ಯವಸಾಯದ ಮಾಲುಗಳಿವೆಯೋ ಅವು ಸಪ್ಲೈ ಆಗುತ್ತಿವೆಯೆಂದು ಗೊತ್ತಿದೆ.

ಶ್ರೀ ಜಿ. ದುಗ್ಗಪ್ಪನವರು.—ಅವರು ಕೊಡುತ್ತಿರತಕ್ಕ flats ಮತ್ತು rods ಗಳು ಯಾವ ಉಪಯೋಗಕ್ಕೂ ಬರುವುದಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಉಪಯೋಗವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಬ್ಬಿಣದ ಮಟ್ಟಿಗೆ ಯಾವುದಾದರೂ ಉಪಯೋಗಕ್ಕೆ ಬಂದೇ ಬರುತ್ತದೆ.

ಶ್ರೀ ಜಿ. ದುಗ್ಗಪ್ಪನವರು.—ಅಂಥಾದ್ದನ್ನು ನಿಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೀರಾ?

Sri H. SIDDAVEERAPPA.—It is a hypothetical question, Sir.

ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಮಲ್ಟಿಪರ್ಪಸ್ ಸೊಸೈಟಿಗಳು ಕಬ್ಬಿಣದ ಸಾಮಾನುಗಳನ್ನು ಯಾವ ಲಾಭವೂ ಇಲ್ಲದೆ ವಾರಾಟ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು—6% ಅಷ್ಟು ಕಮಿಷನ್ ಕೊಡುತ್ತೇವೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಕಮಿಷನ್ ಕೊಟ್ಟಿರುವುದು ವ್ಯವಸಾಯದ ಇರಾಖೆಯವರಿಗೆ. ಈ ಸೊಸೈಟಿಗಳವರು ಯಾವ ಲಾಭವೂ ಇಲ್ಲದೆ ಮಾರುತ್ತಾರೆ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಸೊಸೈಟಿಯವರು 6% ಲಾಭವಿಟ್ಟು ಮಾರುವುದಕ್ಕೆ ಅವಕಾಶ ಕೊಟ್ಟಿದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಕಬ್ಬಿಣದ ಸಾಮಾನುಗಳಿಂದ ಗಾಡಿ ವಗ್ಗೆರೆಗಳನ್ನು ಈ ಸೊಸೈಟಿಗಳವರು ಮಾಡಿ ಮಾರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಸೊಸೈಟಿಗಳವರು ಮಾರಿದ್ದಾರೆ.

ಶ್ರೀ ಆರ್. ಅನಂತರಾಮ್‌ಅವರು (ಚಾಮರಾಜಪೇಟೆ).—ಕಬ್ಬಿಣದ ಸಾಮಾನುಗಳನ್ನು ಸೊಸೈಟಿಗಳು ಸಾಲವಾಗಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

Sri H. SIDDAVEERAPPA.—That does not arise out of this question.

Allotment for Co-operative Farming.

Q.—468. **Sri D. R. KARI GOWDA** (Hassan):—

Will the Government be pleased to state :—

(*a*) the amount allotted for Co-operative Farming during 1950-51 and 1951-52 ;

(*b*) of this, the amount spent each year ;

(*c*) the places where collective farming on a Co-operative basis is being carried on in the State ;

(*d*) the amount of subsidy and loans granted to each Co-operative Farming Society each year ;

(*e*) whether there are any officers specially to supervise the Co-operative Farming Societies in the Mysore Government ;

(*f*) whether there are any officers who have studied Co-operative Farming in foreign countries and gained experience therein ?